# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 864 (920)
ಸದಸ್ಯರ ಹೆಸರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 11.03.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ್ಯಂತ ಸರ್ಕಾರದ ಸ್ವಾಧೀನದಲ್ಲಿರುವ ಹಾಗೂ ಗೋಮಾಳ ಭೂಮಿಯೆಂದು ಸರ್ಕಾರ ಘೋಷಿಸಿರುವ ಜಮೀನುಗಳ ವಿವರ ನೀಡುವುದು; ಸದರಿ ಜಮೀನುಗಳನ್ನು ಒತ್ತುವರಿ ಮಾಡಿರುವುದು ಹಾಗೂ ಗುಂಡಿಗಳನ್ನು ಮಾಡಿ ಮಣ್ಣನ್ನು ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು: | ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.<br><br>ರಾಜ್ಯದಲ್ಲಿ ಕಂದಾಯ ಇಲಾಖೆಯಡಿ ಬರುವ ಸರ್ಕಾರಿ ಜಮೀನಿನ ಸಂರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ.<br><br>1. ಕಂದಾಯ ಇಲಾಖೆಯಡಿ ಬರುವ ಸರ್ಕಾರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ರಾಜ್ಯದ ಎಲ್ಲಾ ಜಿಲೆಗಳಲ್ಲಿ, ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಕಾರ್ಯ ಪಡೆಗಳನ್ನು ರಚಿಸಲಾಗಿದೆ. ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳು ಕಾಲಬದ್ಧ ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು, ಒತ್ತುವರಿ ಆಗಿರುವ ಸರ್ಕಾರಿ ಜಮೀನುಗಳನ್ನು ತೆರವುಗೊಳಿಸಲು ಕ್ರಮವಹಿಸುತ್ತಿದ್ದಾರೆ.<br>2. ಬೀಟ್ ತಂತ್ರಾಂಶ (Beat App): ಸರ್ಕಾರಿ ಜಮೀನುಗಳನ್ನು ಗುರುತಿಸಿ Geofencing ಮಾಡಿ ಒತ್ತುವರಿಗಳಿಂದ ರಕ್ಷಣೆ ಮಾಡುವ ಸಲುವಾಗಿ ಬೀಟ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಇದರಿಂದಾಗಿ ಎಲ್ಲಾ ರೀತಿಯ ಸರ್ಕಾರಿ ಜಮೀನುಗಳನ್ನು ಗುರುತಿಸಿ Geofenicing ಹದ್ದುಬಸ್ತು ಮೂಲಕ ಒತ್ತುವರಿಗಳನ್ನು ಗುರುತಿಸಲಾಗುತ್ತದೆ. ನಂತರ ಸದರಿ ಒತ್ತುವರಿಗಳನ್ನು ತೆರವುಗೊಳಿಸಲು ಮತ್ತು ತಂತ್ರಾಂಶದಲ್ಲಿ ಇಂದೀಕರಿಸಲು ಅವಕಾಶ ನೀಡಲಾಗುತ್ತದೆ. ಸದರಿ ಸರ್ಕಾರಿ ಜಮೀನುಗಳ ಅನಧಿಕೃತ ಒತ್ತುವರಿಯನ್ನು ತಡೆಗಟ್ಟಲು ಸಂಬಂಧಿಸಿದ ಅಧಿಕಾರಿಗಳು ಪ್ರತಿ 3 ತಿಂಗಳಿಗೊಮ್ಮೆ ಸ್ಥಳ ಪರಿಶೀಲನೆ ಮಾಡಿ, ವಿಡಿಯೋ ಮಹಜರ್ ಮತ್ತು ಭಾವಚಿತ್ರಗಳನ್ನು ಅಪ್ಲೋಡ್ (Upload) ಮಾಡಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ರೀತಿಯಾಗಿ ಸರ್ಕಾರಿ ಜಮೀನುಗಳನ್ನು ರಕ್ಷಿಸಲು ನಿರಂತರ ಪರಿವೀಕ್ಷಣೆ ಹಾಗೂ ಮೇಲ್ವಿಚಾರಣೆ ಮಾಡಲು ತಂತ್ರಾಂಶವು ಸಹಾಯಕಾರಿಯಾಗಿರುತ್ತದೆ.<br>3. ಒತ್ತುವರಿ ಪ್ರಕರಣಗಳನ್ನು ಸಮರ್ಥವಾಗಿ ತಡೆಯುವ ಸಲುವಾಗಿ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವನ್ನು ರಚಿಸಲಾಗಿದೆ. ಒತ್ತುವರಿದಾರರ |

| | | |
|---|---|---|
| | | ವಿರುದ್ಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲದಲ್ಲಿ, ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964 ಕಲಂ 192-ಎ ರನ್ವಯ ದಾಖಲಿಸಲಾಗುತ್ತಿದೆ ಹಾಗೂ ಅಕ್ರಮವಾಗಿ ಪರಭಾರೆ ಮಾಡುತ್ತಿರುವವರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ FIR ದಾಖಲಿಸಲಾಗುತ್ತಿದೆ. |
| ಆ) | ಸದರಿ ಸರ್ಕಾರಿ ಗೋಮಾಳ ಭೂಮಿಯು ಕೆಲವೊಂದು ಪ್ರದೇಶದಲ್ಲಿ ಪಾಳು ಬಿದ್ದಿದ್ದು, ಇದನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು; ಈ ಸರ್ಕಾರಿ ಗೋಮಾಳ ಭೂಮಿಗಳ ಮೇಲ್ವಿಚಾರಣೆ ಮಾಡುವುದು ಹಾಗೂ ಸಂರಕ್ಷಣೆ ಮಾಡುವ ಜವಾಬ್ದಾರಿ ಯಾರದ್ದಾಗಿರುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು); | ಸರ್ಕಾರಿ ಗೋಮಾಳ ಜಮೀನುಗಳನ್ನು ಜಾನುವಾರುಗಳ ಮೇವಿಗಾಗಿ ಮಾತ್ರ ಉಪಯೋಗಿಸಲಾಗುತ್ತಿದೆ ಅದನ್ನು ಬೇರೆ ಯಾವುದೇ ಉದ್ದೇಶಗಳಿಗೆ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಸರ್ಕಾರಿ ಗೋಮಾಳದ ಮೇಲ್ವಿಚಾರಣೆ ಮತ್ತು ಸಂರಕ್ಷಣೆ ಮಾಡುವ ಜವಾಬ್ದಾರಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿರುತ್ತದೆ.<br><br>ಸರ್ಕಾರಿ ಜಮೀನುಗಳ ಕಬಳಿಕೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು :-<br><br>1. ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಇಂಡೆಕ್ಸಿಂಗ್ ಅಂಡ್ ಕ್ಯಾಟಲಾಗಿಂಗ್ ಮತ್ತು ಸ್ಕ್ಯಾನಿಂಗ್ ಮಾಡಲಾಗಿದೆ.<br>2. ಭೂಮಿ ತಂತ್ರಾಂಶದಲ್ಲಿ ಎಲ್ಲಾ ಸರ್ಕಾರಿ ಜಮೀನುಗಳನ್ನು ಫ್ಲಾಗ್ ಮಾಡಲಾಗುತ್ತಿದೆ. ಇದರಿಂದ ಸರ್ಕಾರಿ ಜಮೀನುಗಳ ಅನಧಿಕೃತ ವಹಿವಾಟು ಮಾಡಲು ಹಾಗೂ ಅನಧಿಕೃತ ಋಣಭಾರಗಳನ್ನು ಸೃಷ್ಟಿಸಲು ಅವಕಾಶವಿರುವುದಿಲ್ಲ<br>3. ಒತ್ತುವರಿಯಿಂದ ತೆರವುಗೊಳಿಸಲಾದ ಸರ್ಕಾರಿ ಜಮೀನುಗಳಿಗೆ ಕಂದಕ, ತಂತಿಬೇಲಿ ಹಾಕಿ ಮತ್ತು ನಾಮಫಲಕ ಅಳವಡಿಸಿ ಸಂರಕ್ಷಿಸಲು ಕ್ರಮ ವಹಿಸಲಾಗುತ್ತಿದೆ.<br><br>ಖೋಟಾ ದಾಖಲೆಗಳು ಸೃಷ್ಟಿಯಾಗಿರುವಂತಹ ಪ್ರಕರಣಗಳಲ್ಲಿ ದಾಖಲೆಗಳ ನೈಜತೆ ಪರಿಶೀಲನೆಗಾಗಿ Forensic Lab ಗಳಿಗೆ (ವರ್ಷಗಳ ಅಂತರ ಗೊತ್ತಾಗುತ್ತದೆ) ಕಳುಹಿಸಲು ಕ್ರಮ ವಹಿಸಲಾಗುತ್ತಿದೆ |
| ಇ) | 2021-22, 2022-23, 2023-24, 2024-25, 2025-26ನೇ ಸಾಲಿನಲ್ಲಿ ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳಿಗೆ/ಕಛೇರಿಗಳಿಗೆ ನೀಡಲಾಗಿದೆಯೇ; ನೀಡಿದ್ದರೆ ಯಾವ ಸ್ಥಳದಲ್ಲಿ, ಎಷ್ಟು ಜಮೀನನ್ನು ಯಾವ ರಾಜಕೀಯ ಪಕ್ಷಕ್ಕೆ ನೀಡಲಾಗಿದೆ; ನೀಡಿರುವ ಜಮೀನಿನ ಮೌಲ್ಯವೆಷ್ಟು; ಸದರಿ ಜಮೀನುಗಳನ್ನು ನೀಡಲು ಸರ್ಕಾರ ಅನುಸರಿಸಿರುವ ಕ್ರಮಗಳೇನು; ಯಾವ ಇಲಾಖೆಯ ಪೂರ್ವಾನುಮತಿ ಪಡೆಯಲಾಗಿದೆ; ಯಾವ ಉದ್ದೇಶಕ್ಕಾಗಿ ಸರ್ಕಾರಿ ಜಮೀನನ್ನು ರಾಜಕೀಯ ಪಕ್ಷಗಳಿಗೆ/ಕಛೇರಿಗಳಿಗೆ ನೀಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು); | ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ಸರ್ಕಾರದ ನಡವಳಿ ಆದೇಶ ಸಂಖ್ಯೆ.ಕಂಇ/60/ಎಲ್.ಜಿ.ಟಿ/2023 ದಿನಾಂಕ 29.10.2025ರ ಸಂಪೂರ್ಣ ಮಾಹಿತಿ ಒದಗಿಸುವುದು: | ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಉ) | ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(1)(i) ಅನ್ನು ಯಾವ ರೀತಿಯಲ್ಲಿ ಸಡಿಸಲಾಗಿದೆ, ನಿಯಮ ಮೊದಲು ಏನನ್ನು ಹೇಳುತ್ತಿತ್ತು, ಪ್ರಸ್ತುತ ಯಾವ ರೀತಿಯಲ್ಲಿ ಸಡಿಲಿಸಿ ಜಮೀನುಗಳನ್ನು ನೀಡಲಾಗುತ್ತಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು; | ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(1)(i)ರಡಿ ಗುತ್ತಿಗೆ / ಮಂಜೂರು ಮಾಡುವ ಜಮೀನಿನ ಕೃಷಿಯೇತರ ಮಾರ್ಗಸೂಚಿ / ಮಾರುಕಟ್ಟೆ ಮೌಲ್ಯ ವಿಧಿಸಲು ಅವಕಾಶ ಕಲ್ಪಿಸಲಾಗಿದ್ದು, ಮೊದಲು ಮಾರ್ಗಸೂಚಿ / ಮಾರುಕಟ್ಟೆ ಮೌಲ್ಯ ವಿಧಿಸಲಾಗುತ್ತಿತ್ತು. |
| ಊ) | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22-ಎ(2) ರನ್ವಯ ಭೂ ಮಂಜೂರಾತಿಯಲ್ಲಿ ಏನನ್ನು ಸೂಚಿಸುತ್ತದೆ; ನಿಯಮದ ಸಂಪೂರ್ಣ ಮಾಹಿತಿ ನೀಡುವುದು; | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22-ಎ(2) ರನ್ವಯ ಸರ್ಕಾರ ಭೂಮಿಯನ್ನು ನಗರ ಪೌರ ಸರಹದ್ದಿನೊಳಗೆ ಯಾವನೇ ವ್ಯಕ್ತಿ ಅಥವಾ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಅದನ್ನು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸತಕ್ಕದ್ದು ಎಂದು ತಿಳಿಸಲಾಗಿದೆ.<br>ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭದ ದಿನಾಂಕಕ್ಕಿಂತ ಮೊದಲು, ಸಮಾಜಗಳು, ದತ್ತಿ ಅಥವಾ ಧಾರ್ಮಿಕ ಸಂಸ್ಥೆಗಳು ಅಥವಾ ಶಿಕ್ಷಣ ಸಂಸ್ಥೆಗಳು ಅಥವಾ ಕೃಷಿ ಅಥವಾ ಇತರ ಉದ್ದೇಶಗಳಿಗಾಗಿ ಹದಿನೈದು ವರ್ಷಗಳಿಗಿಂತ ಹೆಚ್ಚು ಕಾಲ ಗುತ್ತಿಗೆ ಪಡೆದ ಸರ್ಕಾರಿ ಜಮೀನುಗಳನ್ನು ಸಂಬಂಧಪಟ್ಟ ಉಪ ಆಯುಕ್ತರಿಂದ ವರದಿ ಪಡೆದ ನಂತರ ಸರ್ಕಾರವು ಅಂತಹ ಭೂಮಿಯನ್ನು ಒಂದು ಬಾರಿ ಕ್ರಮವಾಗಿ, ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯದಂತೆ ಮತ್ತು ಈ ನಿಟ್ಟಿನಲ್ಲಿ ಇತರ ಉದ್ದೇಶಕ್ಕಾಗಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯದ ಎರಡು ಪಟ್ಟು ಮೌಲ್ಯದಂತೆ ವಿಲೇವಾರಿ ಮಾಡಲು ಅವಕಾಶವಿರುತ್ತದೆ. |
| ಋ) | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿ ಅಡಕವಾಗಿರುವ ಅಂಶಗಳೇನು (ಸಂಪೂರ್ಣ ಮಾಹಿತಿ ನೀಡುವುದು); | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿ ರಾಜ್ಯ ಸರ್ಕಾರದ ಅಧಿಕಾರಗಳ ಕುರಿತು ಈ ಕೆಳಕಂಡಂತೆ ತಿಳಿಸಲಾಗಿದೆ.<br>ಈ ಹಿಂದಿನ ನಿಯಮಗಳಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ತಾನಾಗಿಯೇ ಅಥವಾ ಡಿವಿಜನಲ್ ಕಮೀಷನರ್ ಅಥವಾ ಡೆಪ್ಯುಟಿ ಕಮೀಷನರ್ ಶಿಫಾರಸ್ಸಿನ ಮೇಲೆ, ಯಾವುದೇ ಪ್ರಕರಣದ ಅಥವಾ ಪ್ರಕರಣಗಳ ವರ್ಗಗಳ ಸಂದರ್ಭದಲ್ಲಿ, ಈ ನಿಯಮಗಳ ಯಾವುದೇ ಉಪ-ಬಂಧಗಳನ್ನು ಸಡಿಲಗೊಳಿಸುವುದು ನ್ಯಾಯವೆಂದು ಮತ್ತು ಯುಕ್ತವೆಂದು ಅಭಿಪ್ರಾಯಪಟ್ಟರೆ, ಅದು ಅಂಥ ಸಡಿಲಿಕೆಗೆ ಕಾರಣಗಳನ್ನು ಅಭಿಲೇಖಿಸಿ, ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಅಂಥ ಸಡಿಲಿಕೆಗೆ ಆದೇಶ ಮೂಲಕ ನಿರ್ದೇಶಿಸಬಹುದು ಮತ್ತು ಅನಂತರ ಅಂಥ ನಿರ್ದೇಶನಕ್ಕನುಸಾರವಾಗಿ ಅಂಥ ಪ್ರಕರಣದಲ್ಲಿ ಅಥವಾ ಪ್ರಕರಣಗಳ ವರ್ಗಗಳ ಸಂಬಂಧದಲ್ಲಿ ಭೂಮಿಯನ್ನು ಮಂಜೂರು ಮಾಡಬಹುದು. |

ಸಂಖ್ಯೆ: ಆರ್‌ಡಿ 52 ಎಲ್‌ಜಿಕ್ಯೂ 2026.

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ-1

| ಕ್ರ ಸಂ | ಜಿಲ್ಲೆ | ಸರ್ಕಾರದ ಸ್ವಾಧೀನದಲ್ಲಿರುವ ಹಾಗೂ ಗೋಮಾಳ ಭೂಮಿ ಒಟ್ಟು ವಿಸ್ತೀರ್ಣ (ಎಕರೆ/ಗುಂಟೆ) | ರಾಜಕೀಯ ಪಕ್ಷಗಳಿಗೆ/ಕಛೇರಿಗಳಿಗೆ ನೀಡಲಾಗಿರುವ ಸರ್ಕಾರಿ ಜಮೀನಿನ ವಿವರ | | | | |
|---|---|---|---|---|---|---|---|
| | | | ವರ್ಷ | ವಿಸ್ತೀರ್ಣ (ಎಕರೆ/ಗುಂಟೆ) | ರಾಜಕೀಯ ಪಕ್ಷದ ಹೆಸರು | ಜಮೀನಿನ ಮೌಲ್ಯ ರೂ.ಗಳಲ್ಲಿ | ಜಮೀನು ಮಂಜೂರಾತಿ ಉದ್ದೇಶ |
| 1 | ಬೆಂಗಳೂರು ನಗರ | 118425-04 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 2 | ಬೆಂಗಳೂರು ದಕ್ಷಿಣ | 1,27,695-02.08 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 3 | ಬೆಂಗಳೂರು ಗ್ರಾಮಾಂತರ | 77324-04 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0-08 | ಕಾಂಗ್ರೇಸ್ | 6,07,020 | ಕಾಂಗ್ರೇಸ್ ಭವನ |
| | | | 2025-26 | 0-15 | ಕಾಂಗ್ರೇಸ್ | 5.31.300 | ಕಾಂಗ್ರೇಸ್ ಕಛೇರಿ ಕಟ್ಟಡ ನಿರ್ಮಾಣ |
| 4 | ಚಿಕ್ಕಬಳ್ಳಾಪುರ | 131041-07 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 5 | ಕೋಲಾರ | 65692-21 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |

| | | | | | | | |
|---|---|---|---|---|---|---|---|
| 6 | ತುಮಕೂರು | 186313-29 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0-09.08 | ಕಾಂಗ್ರೇಸ್ | 138170 | ಕಾಂಗ್ರೇಸ್ ಕಛೇರಿ ಕಟ್ಟಡ ನಿರ್ಮಾಣಕ್ಕೆ |
| 7 | ಚಿತ್ರದುರ್ಗ | 148481-08 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0-06 | ಕಾಂಗ್ರೇಸ್ | 62705-00 | ಕಾಂಗ್ರೇಸ್ ಕಛೇರಿ ಕಟ್ಟಡ ನಿರ್ಮಾಣಕ್ಕೆ |
| 8 | ದಾವಣಗೆರೆ | 84360-00 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 9 | ಶಿವಮೊಗ್ಗ | 312627-31 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 10 | ಕೊಡಗು | 1207-25 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 11 | ಹಾಸನ | 142009-02 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| | | | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |

| | | | | | | | |
|---|---|---|---|---|---|---|---|
| 12 | ಮಂಡ್ಯ | 1,29,049,00 | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 13 | ಮೈಸೂರು | 52216-15 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 14 | ಉಡುಪಿ | 3616-21 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0.11 | ಕಾಂಗ್ರೆಸ್ | 1,79,539-00 | ಕಾಂಗ್ರೆಸ್ ಕಛೇರಿ ಕಟ್ಟಡ ನಿರ್ಮಾಣಕ್ಕೆ |
| | | | | 0.14 | ಕಾಂಗ್ರೆಸ್ | 1,66,929/- | ಕಾಂಗ್ರೆಸ್ ಭವನ ನಿರ್ಮಾಣದ ಉದ್ದೇಶಕ್ಕಾಗಿ ಕಾಂಗ್ರೆಸ್ ಭವನ ಟ್ರಸ್ಟ್ ಹೆಸರಿಗೆ ಮಂಜೂರು |
| | | | | '0.20 | ಕಾಂಗ್ರೆಸ್ | 81,666/- | ಕಾಂಗ್ರೆಸ್ ಭವನ ನಿರ್ಮಾಣದ ಉದ್ದೇಶಕ್ಕಾಗಿ ಕಾಂಗ್ರೆಸ್ ಭವನ ಟ್ರಸ್ಟ್ ಹೆಸರಿಗೆ ಮಂಜೂರು |
| 15 | ಚಾಮರಾಜನಗರ | 18993.49 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0.25 | ಕಾಂಗ್ರೆಸ್ | 1562565 | ಕಾಂಗ್ರೆಸ್ ಭವನ |
| 16 | ದಕ್ಷಿಣ ಕನ್ನಡ | 6666-33 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0.08 | ಕಾಂಗ್ರೆಸ್ | 19,471 | ಕಾಂಗ್ರೆಸ್ ಭವನ |
| 17 | ಚಿಕ್ಕಮಗಳೂರು | 245293-21 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |

| | | | | | | | |
|---|---|---|---|---|---|---|---|
| 18 | ಬಾಗಲಕೋಟೆ | 5718-37 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 19 | ಬೆಳಗಾವಿ | 56227-18 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 1-00 | ಕಾಂಗ್ರೆಸ್ | 1,65,415-00 | ಕಾಂಗ್ರೆಸ್ ಭವನ |
| 20 | ವಿಜಯಪುರ | 17135ಎ-11ಗು | 2021-22 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2022-23 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2023-24 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2024-25 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2025-26 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| 21 | ಧಾರವಾಡ | 12267ಎ-39ಗು-04ಗು | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |
| 22 | ಗದಗ | 2275ಎ-11ಗುಂ | 2021-22 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2022-23 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2023-24 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |

| | | | | | | | |
|---|---|---|---|---|---|---|---|
| | | | 2024-25 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2025-26 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| 23 | ಹಾವೇರಿ | 10112ಎ-24ಗು-10ಆಣೆ | 2021-22 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2022-23 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2023-24 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2024-25 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2025-26 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| 24 | ಉತ್ತರ ಕನ್ನಡ | 2980ಎ-26ಗುಂ-9 ಆಣೆ | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0-20-0 | ಕಾಂಗ್ರೆಸ್ | 3,25,000/- | ಕಾಂಗ್ರೆಸ್ ಭವನ ನಿರ್ಮಾಣದ ಉದ್ದೇಶಕ್ಕಾಗಿ ಕಾಂಗ್ರೆಸ್ ಭವನ ಟ್ರಸ್ಟ್ ಹೆಸರಿಗೆ ಮಂಜೂರು |
| 25 | ಕಲಬುರ್ಗಿ | 50693-15 ಎಕರೆ ಗುಂಟೆ | 2021-22 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2022-23 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2023-24 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2024-25 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2025-26 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| 26 | ಬೀದರ | 21459-10ಎಕರೆ ಗುಂಟೆ | 2021-22 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2022-23 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2023-24 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2024-25 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2025-26 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |

| | | | | | | | |
|---|---|---|---|---|---|---|---|
| 27 | ಬಳ್ಳಾರಿ | 18778.92 ಎಕರೆ | 2021-22 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2022-23 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2023-24 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2024-25 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| | | | 2025-26 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | 0 | 0 | 0 |
| 28 | ರಾಯಚೂರು | 49938-03 | 2021-22 | 0 | ಮಂಜೂರಿಸಿರುವುದಿಲ್ಲಾ | - | - |
| | | | 2022-23 | 0 | ಮಂಜೂರಿಸಿರುವುದಿಲ್ಲಾ | - | - |
| | | | 2023-24 | 0 | ಮಂಜೂರಿಸಿರುವುದಿಲ್ಲಾ | - | - |
| | | | 2024-25 | 0 | ಮಂಜೂರಿಸಿರುವುದಿಲ್ಲಾ | - | - |
| | | | 2025-26 | 00-10 | ಕಾಂಗ್ರೆಸ್ | 6250-00 | ಭಾರತಿಯ ಕಾಂಗ್ರೇಸ್ ಭವನ ಟ್ರಸ್ಟ್ |
| 29 | ಕೊಪ್ಪಳ | 21763-39 | 2021-22 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | - | - | - |
| | | | 2022-23 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | - | - | - |
| | | | 2023-24 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | - | - | - |
| | | | 2024-25 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | - | - | - |
| | | | 2025-26 | ಯಾವುದೇ ಜಮೀನು ಮಂಜೂರಿಸಿರುವುದಿಲ್ಲ. | - | - | - |
| 30 | ವಿಜಯನಗರ | 196.36 | 2021-22 | 0 | ಮಂಜೂರಿಸಿರುವುದಿಲ್ಲಾ | 0 | 0 |
| | | | 2022-23 | 0 | ಮಂಜೂರಿಸಿರುವುದಿಲ್ಲಾ | 0 | 0 |
| | | | 2023-24 | 0 | ಮಂಜೂರಿಸಿರುವುದಿಲ್ಲಾ | 0 | 0 |
| | | | 2024-25 | 0 | ಮಂಜೂರಿಸಿರುವುದಿಲ್ಲಾ | 0 | 0 |
| | | | 2025-26 | 0 | ಮಂಜೂರಿಸಿರುವುದಿಲ್ಲಾ | 0 | 0 |
| 31 | ಯಾದಗಿರಿ | 45941-00 | 2021-22 | 0 | 0 | 0 | 0 |
| | | | 2022-23 | 0 | 0 | 0 | 0 |
| | | | 2023-24 | 0 | 0 | 0 | 0 |
| | | | 2024-25 | 0 | 0 | 0 | 0 |
| | | | 2025-26 | 0 | 0 | 0 | 0 |

ಅನುಬಂಧ-2

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಕಸಬಾ ಹೋಬಳಿ, ಕುಣಿಗಲ್ ಕಸಬಾ ಗ್ರಾಮದ ಸ.ನಂ.110 ರಲ್ಲಿ 9½ ಗುಂಟೆ "ಸರ್ಕಾರಿ ಬಿ-ಖರಾಬು" ಜಮೀನನ್ನು ತಾಲ್ಲೂಕು ಕಾಂಗ್ರೆಸ್ ಸಮಿತಿ, ಕುಣಿಗಲ್ ತಾಲ್ಲೂಕು ಇವರಿಗೆ ಕಾಂಗ್ರೆಸ್ ಕಚೇರಿ ಕಟ್ಟಡದ ನಿರ್ಮಾಣಕ್ಕಾಗಿ ಗುತ್ತಿಗೆ ಆಧಾರದ ಮೇಲೆ ನೀಡಿರುವುದನ್ನು ಖಾಯಂ ಆಗಿ ಮಂಜೂರು ಮಾಡುವ ಬಗ್ಗೆ

ಓದಲಾಗಿದೆ: ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರ ಇವರ ಪತ್ರ ಸಂಖ್ಯೆ:ಆರ್‌ಸಿಬಿ/ಎಲ್‌ಎನ್‌ಡಿ/ಸಿಆರ್/17/2019-20, ದಿನಾಂಕ:18.10.2023.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಇವರು ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನ ಸಂಖ್ಯೆ:DIS.LND(1)111-5/1976-77, ದಿನಾಂಕ:27.04.1977 ರಂತೆ ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಕಸಬಾ ಹೋಬಳಿ, ಕುಣಿಗಲ್ ಕಸಬಾ ಗ್ರಾಮದ ಸ.ನಂ.110 ರಲ್ಲಿ 9½ ಗುಂಟೆ "ಸರ್ಕಾರಿ ಬಿ-ಖರಾಬು" ಜಮೀನನ್ನು ವಾರ್ಷಿಕ ರೂ.80/- ಗುತ್ತಿಗೆ ಮೊತ್ತ ವಿಧಿಸಿ ಕಚೇರಿ ಕಟ್ಟಡ ನಿರ್ಮಾಣಕ್ಕೆ ತಾಲ್ಲೂಕು, ಕಾಂಗ್ರೆಸ್ ಸಮಿತಿ, ಕುಣಿಗಲ್ ತಾಲ್ಲೂಕು ಇವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 19(3) ರಡಿ ಕೆಲವೊಂದು ಷರತ್ತುಗಳನ್ನು ವಿಧಿಸಿ 20 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿತ್ತು. ಆದರೆ ಸದರಿ ಜಮೀನು ಗುತ್ತಿಗೆದಾರರಿಗೆ ಹಸ್ತಾಂತರವಾಗಿರುವುದಿಲ್ಲ; ಪ್ರಸ್ತುತ ಸದರಿ ಗುತ್ತಿಗೆ ಆದೇಶವನ್ನು ನವೀಕರಿಸಿಕೊಡಲು ಮಾನ್ಯ ಶಾಸಕರು, ಕುಣಿಗಲ್ ವಿಧಾನಸಭಾ ಕ್ಷೇತ್ರ ಮತ್ತು ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಸಮಿತಿ, ಕುಣಿಗಲ್ ತಾಲ್ಲೂಕು ಇವರು ಕೋರಿರುತ್ತಾರೆ ಎಂದು ತಿಳಿಸುತ್ತಾ, ಅದರಂತೆ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ಇವರು ಜಮೀನಿನ ಗುತ್ತಿಗೆಯನ್ನು 30 ವರ್ಷಗಳ ಅವಧಿಗೆ ನವೀಕರಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಜಮೀನನ್ನು ಗುತ್ತಿಗೆ ನೀಡಿದಾಗಿನಿಂದಲೂ ಇದುವರೆಗೂ ಈ ಹಿಂದೆ ನಿಗದಿಪಡಿಸಿದ್ದ ಗುತ್ತಿಗೆ ದರದ ಎರಡು ಪಟ್ಟು ಮೊತ್ತ ಮತ್ತು ದಂಡವನ್ನು ಭರಿಸಿಕೊಂಡು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ ರಲ್ಲಿ ನಿಗದಿಪಡಿಸಿರುವ ದರದಂತೆ ಗುತ್ತಿಗೆ ಮೊತ್ತವನ್ನು ವಿಧಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 19(ಡಿ) ರಡಿ ಸದರಿ ಜಮೀನನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಉಪಯೋಗಿಸುವ ಷರತ್ತಿಗೊಳಪಡಿಸಿ, ಗುತ್ತಿಗೆಯನ್ನು ನವೀಕರಿಸಬಹುದಾಗಿರುತ್ತದೆ ಎಂದು ಶಿಫಾರಸ್ಸು ಮಾಡುತ್ತಾ, ಪ್ರಾದೇಶಿಕ ಆಯುಕ್ತರು, ಪ್ರಸ್ತಾವನೆಯನ್ನು ಸರ್ಕಾರದ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕಂಇ 60 ಎಲ್‌ಜಿಟಿ 2023, ಬೆಂಗಳೂರು,**
**ದಿನಾಂಕ: 29.10.2025**

ಕಾಂಗ್ರೆಸ್ ಪಕ್ಷದ ವತಿಯಿಂದ ಸಾರ್ವಜನಿಕ ಕಲ್ಯಾಣ ಚಟುವಟಿಕೆಗಳಿಗೆ ಉಪಯೋಗಿಸುವ ಷರತ್ತಿಗೊಳಪಟ್ಟು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 108(ಎನ್) ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 108(ಐ) ನ್ನು ಸಡಿಲಿಸಿ, ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಕಸಬಾ ಹೋಬಳಿ, ಕುಣಿಗಲ್ ಕಸಬಾ ಗ್ರಾಮದ ಸ.ನಂ.110 ರಲ್ಲಿ 9½ ಗುಂಟೆ "ಸರ್ಕಾರಿ ಬಿ-ಖರಾಬು" ಜಮೀನನ್ನು ತಾಲ್ಲೂಕು ಕಾಂಗ್ರೆಸ್ ಸಮಿತಿ, ಕುಣಿಗಲ್ ತಾಲ್ಲೂಕು ಇವರಿಗೆ ಕಾಂಗ್ರೆಸ್ ಕಚೇರಿ ಕಟ್ಟಡದ ನಿರ್ಮಾಣಕ್ಕಾಗಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 27 ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 22ಎ(1)(i) ಅನ್ನು ಸಡಿಲಿಸಿ, ಪ್ರಸ್ತಾಪಿತ ಜಮೀನನ್ನು ಗುತ್ತಿಗೆ ನೀಡಿರುವ ಅವಧಿಯಿಂದ ಈವರೆಗೂ ಹಿಂದೆ ನಿಗದಿಪಡಿಸಿದ್ದ ಗುತ್ತಿಗೆ ದರದ ಎರಡು ಪಟ್ಟು ಮೊತ್ತ ಮತ್ತು ಜಮೀನಿನ ಅನಧಿಕೃತ ಅಧಿಭೋಗಕ್ಕಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 94(1) ರನ್ವಯ ದಂಡನಾ ಶುಲ್ಕವನ್ನು ಸಹ ಭರಿಸಿಕೊಂಡ ನಂತರ, ಪ್ರಸ್ತಾಪಿತ ಜಮೀನಿನ ಪ್ರಚಲಿತ ಮಾರ್ಗಸೂಚಿ ಮೌಲ್ಯದ ಶೇಕಡ 5 ರಷ್ಟು ಮತ್ತು ಇನ್ನಿತರೆ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಖಾಯಂ ಆಗಿ ಮಂಜೂರು ಮಾಡಿದೆ.

**ಷರತ್ತುಗಳು:-**

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಮಂಜೂರು ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದು.
2. ಮಂಜೂರು ಮಾಡಲಾದ ಜಮೀನನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ.
3. ಮಂಜೂರು ಮಾಡಲಾದ ಜಮೀನಿನಲ್ಲಿ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು.
4. ಮಂಜೂರು ಮಾಡಲಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲೀ, ಗುತ್ತಿಗೆ/ಉಪಗುತ್ತಿಗೆ ನೀಡುವುದಾಗಲೀ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆಯನ್ನು ಮಾಡತಕ್ಕದ್ದಲ್ಲ.
5. ಮಂಜೂರು ಮಾಡಲಾದ ಜಮೀನು ಸಂಸ್ಥೆಗೆ ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.
6. ಮಂಜೂರು ಮಾಡಲಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಿಗೆಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.
7. ಮಂಜೂರು ಮಾಡಲಾದ ಆದೇಶವು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮಗಳಿಗೆ ಬದ್ಧವಾಗಿದ್ದು, ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ

ಆದೇಶವನ್ನು ನಿಯಮಾನುಸಾರ ರದ್ದುಗೊಳಿಸಲಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು.

ಈ ಆದೇಶವನ್ನು ದಿನಾಂಕ:25.09.2025 ರಂದು ಜರುಗಿದ ಸಚಿವ ಸಂಪುಟ ಸಭೆಯ ನಿರ್ಣಯದನ್ವಯ (ಪ್ರಕರಣ ಸಂಖ್ಯೆಸಿ:826/2025) ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
Digitally signed by
JAGADEESHA K
Date: 29-10-2025
17:23:29
(ಜಗದೀಶ.ಕೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ಭೂ ಮಂಜೂರಾತಿ-3 ಮತ್ತು ಸಮನ್ವಯ)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ - ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕಾಗಿ

ಇವರಿಗೆ:

1. ಮಹಾಲೇಖಪಾಲರು (ಎ & ಇ ಲೆಕ್ಕಪರಿಶೋಧನೆ-1, ಲೆಕ್ಕ ಪರಿಶೋಧನೆ-2) ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು.
3. ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ, ತುಮಕೂರು.
4. ಸರ್ಕಾರದ ಅಪರ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು.
5. ಅಧ್ಯಕ್ಷರು, ತಾಲ್ಲೂಕು ಕಾಂಗ್ರೆಸ್ ಸಮಿತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ, ತುಮಕೂರು.
6. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ಸಮನ್ವಯ) ಇವರಿಗೆ ಕಾಂಪೆಂಡಿಯಂನಲ್ಲಿ ಸೇರ್ಪಡೆ ಮಾಡಲು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ:7 ಮತ್ತು 8).

* * *